ಕರ್ನಾಟಕ ಸರ್ಕಾರ
# ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

**ಹಿಂಬರಹ ಸಂಖ್ಯೆ: DOF-FISH0FCS/81/2021 ಇ- 626268 ದಿನಾಂಕ:21/09/2022**

ಸರ್ಕಾರದ ಪತ್ರ ಸಂಖ್ಯೆ: ಪಸಂಮೀ ಇ-55 ಮೀಇಇ 2022 ದಿನಾಂಕ:09-06-2022 ರ ಯಥಾ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸುತ್ತಾ. ಸದರಿ ಪತ್ರದಲ್ಲಿ ಜಲಾಶಯಗಳ ವಿಸ್ತೀರ್ಣಕ್ಕನುಗುಣವಾಗಿ ಹೊಸ ಸಂಘಗಳು ನೋಂದಣಿಯಾಗಲು ಸಾಧ್ಯತಾ ಪತ್ರವನ್ನು ನೀಡಲು ಹಾಗೂ ದೊಡ್ಡ ಜಲಸಂಪನ್ಮೂಲ ಇರುವ ಕಡೆ ಒಂದಕ್ಕಿಂತ ಹೆಚ್ಚು ಸಂಘಗಳನ್ನು ನೋಂದಣಿ ಮಾಡಲು ಅನುಮತಿ ಕೋರಿ ಸ್ವೀಕೃತವಾಗುವ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ ಸಾಧ್ಯತಾ ಪತ್ರ ನೀಡಲು ಸರ್ಕಾರದ ಅನುಮತಿ ನೀಡಲಾಗಿದೆ. ಅದರಂತೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

ಅಡಕ: ಲಗತ್ತಿಸಿದೆ.

ಸಹಿ/-

ಮೀನುಗಾರಿಕೆ ನಿರ್ದೇಶಕರು

**ಇವರಿಗೆ,**

ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರುಗಳಿಗೆ
ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ
ಎಲ್ಲಾ ಮೀನುಗಾರಿಕೆ ಸಹಾಯಕ ನಿರ್ದೇಶಕರುಗಳಿಗೆ

ಮೀನುಗಾರಿಕೆ ನಿರ್ದೇಶಕರ ಪರವಾಗಿ

23/09/2022 23/09

## ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ ಇ-55 ಮೀಇಇ 2022

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ: 09-06-2022

ಇವರಿಂದ,
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ವಿಕಾಸಸೌಧ,
ಬೆಂಗಳೂರು.

"ಅತೀ ಜರೂರು"

ಇವರಿಗೆ,
ಮೀನುಗಾರಿಕೆ ನಿರ್ದೇಶಕರು
ಬೆಂಗಳೂರು.

ಮಾನ್ಯರೇ,

ವಿಷಯ:- ಒಂದೊಂದೇ ಮೀನುಗಾರ ಸಹಕಾರ ಸಂಘವಿರುವ ಕಡೆ ಜಲಾಶಯದ ವಿಸ್ತೀರ್ಣಕ್ಕನುಗುಣವಾಗಿ ಹೊಸ ಸಂಘಗಳ ನೋಂದಣಿಯಾಗಲು ಸಾಧ್ಯತಾ ಪ್ರಮಾಣ ಪತ್ರ ನೀಡಲು ಹಾಗೂ ಸರ್ಕಾರದ ಆದೇಶದ ಅನುಬಂಧ-1ರಲ್ಲಿನ ನಿಯಮವನ್ನು ಸಡಿಲಿಸಿ ಮೀನುಗಾರರಿಗೆ ಅನುವು ಮಾಡಿಕೊಡುವಂತೆ ಮನವಿಯ ಕುರಿತು ಅಗತ್ಯ ಕ್ರಮ ವಹಿಸಲು ಕೋರಿರುವ ಬಗ್ಗೆ.

ಉಲ್ಲೇಖ:- ಮೀನುಗಾರಿಕೆ ನಿರ್ದೇಶಕರ ಏಕಕಡತ ಪತ್ರ ಸಂಖ್ಯೆ: DoF-FISHOFCS/81/2021, ದಿನಾಂಕ: 22-03-2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದ ಕಡೆಗೆ ತಮ್ಮ ಗಮನವನ್ನು ಸೆಳೆಯುತ್ತಾ, ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 125 ಮೀಇಇ 2013, ದಿನಾಂಕ: 23/02/2014ರ ಕಂಡಿಕೆ-4ರ ವಿಲೇವಾರಿ ವಿಧಾನಗಳ ಕ್ರಮ ಸಂಖ್ಯೆ 1(ಆ)ರನ್ವಯ ಪ್ರತಿ ಅರ್ಹ ಮೀನುಗಾರರ ಸಹಕಾರ ಸಂಘಕ್ಕೆ ಆ ಸಂಘದ ಬೈಲಾ ಪ್ರಕಾರ ಅದರ ಕಾರ್ಯವ್ಯಾಪ್ತಿಯಲ್ಲಿ ಗರಿಷ್ಠ 300 ಹೆಕ್ಟೇರ್ ಜಲವಿಸ್ತೀರ್ಣಕ್ಕೆ ಗರಿಷ್ಠ 3 ಕೆರೆ ಅಥವಾ ಈ ಆದೇಶದ ಅನುಬಂಧ-2ರಲ್ಲಿ ಪಟ್ಟಿ ಮಾಡಿರುವ ಗರಿಷ್ಠ 1 ಜಲಾಶಯ ಅಥವಾ 3 ನದಿ ಭಾಗ ಮಾತ್ರ ಗುತ್ತಿಗೆ ನೀಡಬೇಕೆಂದಿರುತ್ತದೆ. 300 ಹೆಕ್ಟೇರ್ ಜಲವಿಸ್ತೀರ್ಣ ಮೀರಿದ ಜಲಸಂಪನ್ಮೂಲಗಳಿದ್ದ ಸಂದರ್ಭದಲ್ಲಿ ಕೇವಲ 1 ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮಾತ್ರ ಗುತ್ತಿಗೆಗೆ ಪಡೆಯಲು ಸದರಿ ಮೀನುಗಾರರ ಸಹಕಾರ ಸಂಘ ಅರ್ಹತೆಯನ್ನು ಹೊಂದಿರುತ್ತದೆ ಎಂದಿದ್ದು, ಒಂದೊಂದೇ ಮೀನುಗಾರರ ಸಹಕಾರ ಸಂಘಗಳಿರುವ ಕಡೆ ಜಲಾಶಯ ವಿಸ್ತೀರ್ಣಕ್ಕನುಗುಣವಾಗಿ ಹೊಸ ಸಂಘಗಳು ನೊಂದಣಿಯಾಗಲು ಸಾಧ್ಯತಾ ಪತ್ರವನ್ನು ನೀಡಲು ಹಾಗೂ ದೊಡ್ಡ ಜಲಸಂಪನ್ಮೂಲ ಇರುವ ಕಡೆ ಒಂದಕ್ಕಿಂತ ಹೆಚ್ಚು ಸಂಘಗಳನ್ನು ನೊಂದಣಿ ಮಾಡುವುದು ಸಮಂಜಸವಾಗಿರುವುದಿಲ್ಲವೆಂದು ತಿಳಿಸಿರುವುದು ಸರಿಯಷ್ಟೆ.

ಆದರೆ, ಜಲಾಶಯಗಳ ವಿಸ್ತೀರ್ಣಕ್ಕನುಗುಣವಾಗಿ ಹೊಸ ಸಂಘಗಳು ನೊಂದಣಿಯಾಗಲು ಸಾಧ್ಯತಾ ಪತ್ರವನ್ನು ನೀಡಲು ಹಾಗೂ ದೊಡ್ಡ ಜಲಸಂಪನ್ಮೂಲ ಇರುವ ಕಡೆ ಒಂದಕ್ಕಿಂತ ಹೆಚ್ಚು ಸಂಘಗಳನ್ನು ನೋಂದಣಿ ಮಾಡಲು ಅನುಮತಿ ಕೋರಿ ಸ್ವೀಕೃತವಾಗುವ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ,



Generated from eOffice by NAGESHA T, DOF-SDA(NGT), SECOND DIVISION ASSISTANT, DIRECTORATE OF FISHERIES on 23/09/2022 12:43 PM

ಸಾಧ್ಯತಾ ಪತ್ರ ನೀಡಲು ಸರ್ಕಾರದ ಅನುಮತಿ ನೀಡಲಾಗಿದೆ ಎಂದು ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.
(ಮಾನ್ಯ ಮೀನುಗಾರಿಕೆ ಸಚಿವರಿಂದ ಅನುಮೋದಿಸಲ್ಪಟ್ಟಿದೆ)

ತಮ್ಮ ನಂಬುಗೆಯ
Kamakshi U.A. 9/6/2022
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀನುಗಾರಿಕೆ)

29.6.2022.



Generated from eOffice by NAGESHA T, DOF-SDA(NGT), SECOND DIVISION ASSISTANT, DIRECTORATE OF FISHERIES on 23/09/2022 12:43 PM